## 1. ಮಾಡ್ಯೂಲ್ ಮತ್ತು ಇದರ ರಚನೆಯ ವಿವರಗಳು

| ಮಾಡ್ಯೂಲ್ ವಿವರ | |
|---|---|
| ವಿಷಯ | ಅರ್ಥಶಾಸ್ತ್ರ |
| ಕೋರ್ಸ್ | ಭಾರತೀಯ ಆರ್ಥಿಕ ಅಭಿವೃದ್ಧಿ 01 (ತರಗತಿ XI , ಸೆಮಿಸ್ಟರ್ - 1) |
| ಮಾಡ್ಯೂಲ್ ಶೀರ್ಷಿಕೆ | 1991 ರಿಂದ ಆರ್ಥಿಕ ಸುಧಾರಣೆ - ಭಾಗ 1 |
| ಮಾಡ್ಯೂಲ್ ಐಡಿ | keec_10301 |
| ಪೂರ್ವಾಪೇಕ್ಷಿತ ಅಂಶಗಳು | 1950-1990 ರವರಿಗಿನ ಭಾರತೀಯ ಆರ್ಥಿಕತೆಯ ಬಗ್ಗೆ ತಿಳಿವಳಿಕೆ |
| ಉದ್ದೇಶಗಳು | ವಿದ್ಯಾರ್ಥಿಗಳು ಈ ಪಾಠವನ್ನು ಓದಿ ಕಲಿತ ನಂತರ ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳುತ್ತಾರೆ:<br>• ಆರ್ಥಿಕ ಸುಧಾರಣೆ ಎಂದರೇನು?<br>• ಆರ್ಥಿಕ ಸುಧಾರಣೆಯ ಹಿಂದಿನ ಕಾರಣವೇನು?<br>• ಹೊಸ ಆರ್ಥಿಕ ನೀತಿ<br>• ಉದಾರೀಕರಣ |
| ಪ್ರಮುಖ ಪದಗಳು | ಆರ್ಥಿಕ ಸುಧಾರಣೆಗಳು, ಹೊಸ ಆರ್ಥಿಕ ನೀತಿ, ಉದಾರೀಕರಣ |

## 2. Development Team

| Role | Name | Affiliation |
|---|---|---|
| National MOOC Coordinator (NMC) | Prof. Amarendra P. Behera | CIET, NCERT, New Delhi |
| Program Coordinator | Dr. Mohd. Mamur Ali | CIET, NCERT, New Delhi |
| Course Coordinator (CC) / PI | Prof. Neeraja Rashmi | DESS, NCERT, New Delhi |
| Subject Matter Expert (SME) | Mr. Naveen Sadhu | Guru Nanak Public School, Rajouri Garden, New Delhi |
| Review Team | Dr. Meera Malhan<br>Dr. Himanshu Singh | DCAC, University of Delhi,<br>Satyawati College (Eve.), University of Delhi |
| Translator | Jnana Murthy B.R. | Resource Person, National Translation Mission, Central Institute of Indian Languages, Mansagangotri, Mysuru, Karnataka |

## ಪರಿವಿಡಿ:

1. ಪರಿಚಯ

2. ಆರ್ಥಿಕ ಸುಧಾರಣೆಗೆ ಕಾರಣಗಳು

3. ಹೊಸ ಆರ್ಥಿಕ ನೀತಿ - ಲಕ್ಷಣಗಳು

4. ಉದಾರೀಕರಣ

    4.1 ಕೈಗಾರಿಕಾ ವಲಯದ ಸುಧಾರಣೆಗಳು

    4.2 ಹಣಕಾಸು ವಲಯದ ಸುಧಾರಣೆಗಳು

    4.3 ತೆರಿಗೆ ಸುಧಾರಣೆಗಳು

    4.4 ವಿದೇಶಿ ವಿನಿಮಯ ಸುಧಾರಣೆಗಳು

5. ವ್ಯಾಪಾರ ಮತ್ತು ಹೂಡಿಕೆ ನೀತಿಯ ಸುಧಾರಣೆಗಳು

6. ಸಾರಾಂಶ

## 1. ಪರಿಚಯ

ಸ್ವಾತಂತ್ರ್ಯಾ ನಂತರ, ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯ ಅನುಕೂಲಗಳನ್ನು ಯೋಜಿತ ಆರ್ಥಿಕ ವ್ಯವಸ್ಥೆಯೊಂದಿಗೆ ಸಂಯೋಜಿಸುವ ಮೂಲಕ ಭಾರತವು ಮಿಶ್ರ ಆರ್ಥಿಕ ಚೌಕಟ್ಟನ್ನು ಅನುಸರಿಸಿತು. ಕೆಲವು ವಿದ್ವಾಂಸರು ವಾದಿಸುವ ಪ್ರಕಾರ ವರ್ಷಗಳು ಕಳೆದಂತೆ ಈ ನೀತಿಯು ಆರ್ಥಿಕತೆಯನ್ನು ನಿಯಂತ್ರಿಸುವ ಗುರಿಯನ್ನು ಹೊಂದಿರುವ ವಿವಿಧ ನಿಯಮಗಳು ಮತ್ತು ಕಾನೂನುಗಳನ್ನು ಸ್ಥಾಪಿಸಲು ಕಾರಣವಾಯಿತು ಮತ್ತು ಬದಲಾಗಿ ಬೆಳವಣಿಗೆ ಮತ್ತು ಅಭಿವೃದ್ಧಿಯ ಪ್ರಕ್ರಿಯೆಗೆ ಅಡ್ಡಿಯುಂಟುಮಾಡಿತು. ಇತರರು ಹೇಳುವಂತೆ ಭಾರತವು ತನ್ನ ಅಭಿವೃದ್ಧಿಯ ಹಾದಿಯನ್ನು ಶೂನ್ಯದಿಂದ ಪ್ರಾರಂಭಿಸಿ, ಉಳಿತಾಯದ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಯಿತು ಮತ್ತು ಅದು ವಿವಿಧ ಸರಕುಗಳನ್ನು ಉತ್ಪಾದಿಸುವ ವೈವಿಧ್ಯಮಯ ಕೈಗಾರಿಕಾ ವಲಯವನ್ನು ಅಭಿವೃದ್ಧಿಪಡಿಸಿತು ಮತ್ತು ಕೃಷಿ ಉತ್ಪಾದನೆಯ ನಿರಂತರ ವಿಸ್ತರಣೆಯೊಂದಿಗೆ ಆಹಾರ ಸುರಕ್ಷತೆಯನ್ನು ಖಾತರಿಪಡಿಸಿತು.

1991 ರಲ್ಲಿ ಭಾರತ ತನ್ನ ಬಾಹ್ಯ ಸಾಲಕ್ಕೆ ಸಂಬಂಧಿಸಿದ ಆರ್ಥಿಕ ಬಿಕ್ಕಟ್ಟನ್ನು ಎದುರಿಸಿತು. ವಿದೇಶದಿಂದ ಪಡೆದ ಸಾಲಗಳನ್ನು ಮರುಪಾವತಿ ಮಾಡಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ; ಪೆಟ್ರೋಲಿಯಂ ತೈಲ ಮತ್ತು ಇತರ ಪ್ರಮುಖ ವಸ್ತುಗಳನ್ನು ಆಮದು ಮಾಡಿಕೊಳ್ಳಲು ನಾವು ಸಾಮಾನ್ಯವಾಗಿ ನಿರ್ವಹಿಸುವ ವಿದೇಶಿ ವಿನಿಮಯ ಮೀಸಲುಗಳು ಹದಿನೈದು ದಿನಗಳಿಗೂ ಸಾಕಾಗದ ಮಟ್ಟಕ್ಕೆ ಇಳಿದವು. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಿಕ್ಕಟ್ಟು ಮತ್ತಷ್ಟು

ಹೆಚ್ಚಾಯಿತು. ಇವೆಲ್ಲವೂ ಸರ್ಕಾರ ನಮ್ಮ ಅಭಿವೃದ್ಧಿ ಕಾರ್ಯತಂತ್ರಗಳ ದಿಕ್ಕನ್ನು ಬದಲಿಸುವ ಹೊಸ ನೀತಿ ಕ್ರಮಗಳನ್ನು ಪರಿಚಯಿಸಲು ಕಾರಣವಾಯಿತು.

***ಆರ್ಥಿಕ ಸುಧಾರಣೆಗಳು ಆರ್ಥಿಕತೆಯನ್ನು ಹೆಚ್ಚು ಮಾರುಕಟ್ಟೆ ಮತ್ತು ಸೇವಾ ಆಧಾರಿತವಾಗಿಸುವ ಮತ್ತು ಖಾಸಗಿ ವಲಯ ಮತ್ತು ವಿದೇಶಿ ಹೂಡಿಕೆಯ ಪಾತ್ರವನ್ನು ವಿಸ್ತರಿಸುವ ಗುರಿಯೊಂದಿಗೆ ಆರ್ಥಿಕ ನೀತಿಗಳ ಒಂದು ಗುಂಪನ್ನು ಸೂಚಿಸುತ್ತವೆ.***

**ಆರ್ಥಿಕ ಸುಧಾರಣೆಗಳ ಉದ್ದೇಶಗಳು**

1. ಆರ್ಥಿಕತೆಯನ್ನು ಹೆಚ್ಚು ಸ್ಪರ್ಧಾತ್ಮಕವಾಗಿಸಲು.

2. ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸಲು.

3. ಕೈಗಾರಿಕೆಗಳನ್ನು ಹೆಚ್ಚು ಪರಿಣಾಮಕಾರಿ ಮತ್ತು ಉತ್ಪಾದಕವಾಗಿಸಲು.

4. ಭಾರತೀಯ ಆರ್ಥಿಕತೆಯ ಅಭಿವೃದ್ಧಿಗೆ ಜಾಗತಿಕ ಸಂಪನ್ಮೂಲಗಳನ್ನು ಬಳಸಲು.

5. ಸಾರ್ವಜನಿಕ ಉದ್ಯಮಗಳ ಪಾತ್ರವನ್ನು ತರ್ಕಬದ್ಧಗೊಳಿಸಲು ಮತ್ತು ಅವುಗಳ ಕಾರ್ಯಕ್ಷಮತೆಯನ್ನು ಸುಧಾರಿಸಲು.

6. ಹಣಕಾಸಿನ ಕೊರತೆಯನ್ನು ನಿಯಂತ್ರಿಸಲು.

7. ಚಾಲ್ತಿ ಖಾತೆ ಸಂದಾಯದ ಅಂತರದ (ಬ್ಯಾಲೆನ್ಸ್ ಆಫ್ ಪೇಮೆಂಟ್ಸ್) ಕೊರತೆಯನ್ನು ಕಡಿಮೆ ಮಾಡಲು.

## 2. ಆರ್ಥಿಕ ಸುಧಾರಣೆಗೆ ಕಾರಣಗಳು

1991 ರಲ್ಲಿ ಭಾರತದ ಆರ್ಥಿಕ ಸ್ಥಿತಿ ಶೋಚನೀಯವಾಗಿತ್ತು. ಹಲವಾರು ಕಾರಣಗಳ ಸಂಚಿತ ಪರಿಣಾಮ ಇದಾಗಿದ್ದಿತು. ದೇಶದಲ್ಲಿ ಪ್ರಮುಖ ಆರ್ಥಿಕ ಸುಧಾರಣೆಗಳನ್ನು ಮಾಡಲು ಉಂಟಾದ ವಿವಿಧ ಕಾರಣಗಳನ್ನು ಈಗ ನಾವು ಚರ್ಚಿಸೋಣ;

- **ಸಾರ್ವಜನಿಕ ವಲಯದ ಕಳಪೆ ಸಾಧನೆ:** 1951 ರಿಂದ 1990 ರವರೆಗಿನ 40 ವರ್ಷಗಳ ಅವಧಿಯಲ್ಲಿ ಭಾರತದ ಆರ್ಥಿಕ ಅಭಿವೃದ್ಧಿಗಾಗಿ ಕೆಲಸ ಮಾಡಲು ಸಾರ್ವಜನಿಕ ವಲಯಕ್ಕೆ ಪ್ರಮುಖ ಪಾತ್ರ ವಹಿಸಲಾಗಿತ್ತು. ಆರಂಭಿಕ 15 ವರ್ಷಗಳಲ್ಲಿ ಸಾರ್ವಜನಿಕ ವಲಯದ ಸಂಸ್ಥೆಗಳ ಕಾರ್ಯನಿರ್ವಹಣೆ (ಪಿಎಸ್‌ಯು) ತೃಪ್ತಿದಾಯಕವಾಗಿದ್ದಿತು ಆದರೆ ಅದರ ನಂತರ ಹೆಚ್ಚಿನವು ನಷ್ಟವನ್ನು ಅನುಭವಿಸಲು ಪ್ರಾರಂಭಿಸಿದವು. ಆದಾಗ್ಯೂ, ಕೆಲವು ಸಾರ್ವಜನಿಕ ಉದ್ಯಮಗಳನ್ನು ಹೊರತುಪಡಿಸಿ, ಒಟ್ಟಾರೆ ಕಾರ್ಯಕ್ಷಮತೆ ಬಹಳ ನಿರಾಶಾದಾಯಕವಾಗಿತ್ತು.

ಹೆಚ್ಚಿನ ಸಂಖ್ಯೆಯ ಸಾರ್ವಜನಿಕ ವಲಯದ ಉದ್ಯಮಗಳಿಂದ ಉಂಟಾದ ಭಾರಿ ನಷ್ಟವನ್ನು ಪರಿಗಣಿಸಿ, ಸರ್ಕಾರವು ಅಗತ್ಯ ಸುಧಾರಣೆಗಳ ಅಗತ್ಯತೆಗೆ ಮತ್ತು ಖಾಸಗಿ ವಲಯಕ್ಕೆ ಹೆಚ್ಚಿನ ಒತ್ತು ನೀಡಿತು.

- **ಸಂದಾಯದ ಅಂತರದ ಕೊರತೆ (ಬಿಒಪಿ):** ಆಮದುಗಳಿಗೆ ನೀಡಬೇಕಾದ ಒಟ್ಟು ವಿದೇಶಿ ಪಾವತಿಗಳು ರಫ್ತಿನಿಂದ ಬರಬಹುದಾದ ಒಟ್ಟು ವಿದೇಶಿ ಸ್ವೀಕೃತಿಗಳನ್ನು ಮೀರಿದಾಗ ಬಿಒಪಿಯಲ್ಲಿ ಕೊರತೆ ಉಂಟಾಗುತ್ತದೆ. ಭಾರಿ ಸುಂಕ ಮತ್ತು ಕೋಟಾಗಳನ್ನು ವಿಧಿಸಿದ ನಂತರವೂ ಆಮದುಗಳಲ್ಲಿ ತೀವ್ರ ಏರಿಕೆ ಕಂಡುಬಂದಿತು. ಮತ್ತೊಂದೆಡೆ, ಕಡಿಮೆ ಗುಣಮಟ್ಟ ಮತ್ತು ಹೆಚ್ಚಿನ ಬೆಲೆಗಳಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ಸರಕುಗಳ ರಫ್ತು ನಿಧಾನಗತಿಯ ಬೆಳವಣಿಗೆಯನ್ನು ಕಂಡಿತು.

  1980-81 ರಿಂದ ಭಾರತದ ಬಿಒಪಿ ಕೊರತೆ ನಿರಂತರವಾಗಿ ಏರುತ್ತಲೇ ಇದೆ. 1980-81 ರಲ್ಲಿ ರೂ 2,210 ಕೋಟಿಯಷ್ಟಿದ್ದ ಭಾರತದ ಬಿಒಪಿ ಕೊರತೆ 1990-91 ರಲ್ಲಿ ರೂ. 17,367 ಕೋಟಿಗೆ ಏರಿತು.
- **ಹಣದುಬ್ಬರ ಒತ್ತಡಗಳು:** ಹಣದ ಪೂರೈಕೆಯಲ್ಲಿನ ಹೆಚ್ಚಳ ಮತ್ತು ಅಗತ್ಯ ವಸ್ತುಗಳ ಕೊರತೆಯಿಂದಾಗಿ ಆರ್ಥಿಕತೆಯಲ್ಲಿ ಸಾಮಾನ್ಯ ಬೆಲೆ ಮಟ್ಟದಲ್ಲಿ ಸ್ಥಿರ ಏರಿಕೆ ಕಂಡುಬಂದಿತು. ಹಣದುಬ್ಬರ ದರವು ಸಾರ್ವಕಾಲಿಕ ಗರಿಷ್ಠ 17 ಪ್ರತಿಶತವನ್ನು ತಲುಪಿತು. ಭಾರತದ ರಫ್ತು ವಿಶ್ವ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗದ ಕಾರಣ ಆಮದು ಮತ್ತು ರಫ್ತುಗಳ ನಡುವಿನ ಅಂತರವನ್ನು ಇದು ಮತ್ತಷ್ಟು ಹೆಚ್ಚಿಸಿತು ಮತ್ತು ಅದರ ರಫ್ತು ಆದಾಯವು ತೀವ್ರವಾಗಿ ಕುಸಿಯಿತು.
- **ವಿದೇಶಿ ವಿನಿಮಯ ಮೀಸಲಿನಲ್ಲಿ ಕುಸಿತ:** 1991 ರಲ್ಲಿ, ವಿದೇಶಿ ವಿನಿಮಯ ಮೀಸಲು ಅತ್ಯಂತ ಕೆಳಮಟ್ಟಕ್ಕೆ ಇಳಿಯಿತು ಮತ್ತು ಇದು ದೇಶದಲ್ಲಿ ವಿದೇಶಿ ವಿನಿಮಯ ಬಿಕ್ಕಟ್ಟಿಗೆ ಕಾರಣವಾಯಿತು. ವಿದೇಶಿ ವಿನಿಮಯ ಸಂಗ್ರಹವು ಎರಡು ವಾರಗಳಿಗಿಂತ ಹೆಚ್ಚು ಕಾಲ ಆಮದುಗಳಿಗೆ ಹಣಕಾಸು ಒದಗಿಸಲು ಸಾಕಾಗುತ್ತಿರಲಿಲ್ಲ ಮತ್ತು ಅಂತರರಾಷ್ಟ್ರೀಯ ಸಾಲದಾತರಿಗೆ ಬಡ್ಡಿಯನ್ನು ಪಾವತಿಸದ ಮಟ್ಟಕ್ಕೆ ಕುಸಿಯಿತು.

ಬಿಕ್ಕಟ್ಟು ಎಷ್ಟು ತೀವ್ರವಾಯಿತು ಎಂದರೆ ಸರ್ಕಾರವು ಮತ್ತಷ್ಟು ಸಾಲಗಳನ್ನು ಸಂಗ್ರಹಿಸಲು ಚಿನ್ನವನ್ನು ಅಡಮಾನ ಇಡಬೇಕಾಯಿತು. ಸಾಲವನ್ನು ಪಡೆಯಲು ಭಾರತವು ಉದಾರೀಕರಣವನ್ನು ಅನುಷ್ಠಾನಗೊಳಿಸಿ ಆರ್ಥಿಕತೆಯನ್ನು ತೆರೆಯುತ್ತದೆ ಎಂದು ಈ ಅಂತರರಾಷ್ಟ್ರೀಯ ಸಂಸ್ಥೆಗಳು ನಿರೀಕ್ಷಿಸಿದ್ದವು. ಅವರು ನೀಡಿದ ಸಲಹೆಗಳೆಂದರೆ (i) ಖಾಸಗಿ ವಲಯದ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವುದು, (ii) ಮಾರುಕಟ್ಟೆಯಲ್ಲಿ ಸರ್ಕಾರದ ಪಾತ್ರವನ್ನು ಕಡಿಮೆ ಮಾಡುವುದು ಮತ್ತು (iii) ವ್ಯಾಪಾರ ನಿರ್ಬಂಧಗಳನ್ನು ತೆಗೆದುಹಾಕುವುದು. ವಿಶ್ವ ಬ್ಯಾಂಕ್ ಮತ್ತು ಐಎಂಎಫ್ ಮಂಡಿಸಿದ ಷರತ್ತುಗಳಿಗೆ ಭಾರತ ಒಪ್ಪಿಗೆ ನೀಡಿತು ಮತ್ತು ಅವರು ಭಾರತದ ಹೊಸ ಆರ್ಥಿಕ ನೀತಿಯನ್ನು ಘೋಷಿಸಿದರು.

- **ಸಾಲಗಳ ದೊಡ್ಡ ಹೊರೆ:** ಸರ್ಕಾರದಲ್ಲಿ ಆದಾಯಕ್ಕಿಂತ ಖರ್ಚು ಹೆಚ್ಚಾಗಿತ್ತು. ಪರಿಣಾಮವಾಗಿ, ಸರ್ಕಾರವು ಬ್ಯಾಂಕುಗಳಿಂದ, ಸಾರ್ವಜನಿಕರಿಂದ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಹಣವನ್ನು ಪಡೆಯಬೇಕಾಯಿತು. 1991 ರಲ್ಲಿ ಹಣಕಾಸಿನ ಕೊರತೆಯು ಒಟ್ಟು ದೇಶೀಯ ಉತ್ಪಾದನೆಯ (ಜಿಡಿಪಿ) ಶೇಕಡಾ 8.4 ರಷ್ಟಿತ್ತು. ಐಎಂಎಫ್ 7 ಬಿಲಿಯನ್ ಡಾಲರ್ ಮುಂಗಡ ಸಾಲವನ್ನು ಮಾಡಲು ನಿರ್ಧರಿಸಿತು ಆದರೆ ಅದೇ ಸಮಯದಲ್ಲಿ ಭಾರತ ಸರ್ಕಾರವು ಆರ್ಥಿಕತೆಯಲ್ಲಿ ಆರ್ಥಿಕ ಸುಧಾರಣೆಗಳನ್ನು ಪರಿಚಯಿಸಬೇಕು ಎಂದು ಒತ್ತಾಯಿಸಿತು.

- **ಕೊಲ್ಲಿ ಬಿಕ್ಕಟ್ಟು:** 1990-91 ರಲ್ಲಿ ಇರಾಕ್ ಯುದ್ಧದ ಕಾರಣದಿಂದಾಗಿ ಕಚ್ಚಾ ತೈಲದ ಬೆಲೆಗಳು ಹೆಚ್ಚಾದವು. ಭಾರತವು ಕೊಲ್ಲಿ ರಾಷ್ಟ್ರಗಳಿಂದ ಅಪಾರ ಪ್ರಮಾಣದ ರವಾನೆಯನ್ನು ಪಡೆಯುತ್ತಿತ್ತು. ಯುದ್ಧದ ಹಿನ್ನೆಲೆಯಲ್ಲಿ, ಇದು ಗಂಭೀರವಾದ ಹೊಡೆತವನ್ನು ಅನುಭವಿಸಬೇಕಾಯಿತು ಮತ್ತು ಕೊಲ್ಲಿ ಬಿಕ್ಕಟ್ಟು ಬಿಒಪಿ ಕೊರತೆಯನ್ನು ಮತ್ತಷ್ಟು ಹೆಚ್ಚಿಸಿತು.

- **ಅಸಮರ್ಥ ನಿರ್ವಹಣೆ:** ಆರ್ಥಿಕ ಬಿಕ್ಕಟ್ಟಿನ ಮೂಲವನ್ನು ಭಾರತೀಯ ಆರ್ಥಿಕತೆಯ ಅಸಮರ್ಥ ನಿರ್ವಹಣೆಯಿಂದ ಕಂಡುಹಿಡಿಯಬಹುದು. ತೆರಿಗೆ, ಸಾರ್ವಜನಿಕ ವಲಯದ ಉದ್ಯಮಗಳ ನಡೆಸುವಿಕೆ ಮುಂತಾದ ಆಂತರಿಕ ಮೂಲಗಳಿಂದ ಸಾಕಷ್ಟು ಆದಾಯವನ್ನು ಗಳಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ ಮತ್ತು ಇದೇ ಕಾಲದಲ್ಲಿ ಸರ್ಕಾರದ ವೆಚ್ಚವು ತನ್ನ ಆದಾಯವನ್ನು ಮೀರಲು ಪ್ರಾರಂಭಿಸಿತು. ಕೆಲವೊಮ್ಮೆ, ಇತರ ದೇಶಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಎರವಲು ಪಡೆದ ವಿದೇಶಿ ವಿನಿಮಯವನ್ನು ನಿತ್ಯಬಳಕೆಯ ಅಗತ್ಯತೆಗಳಿಗಾಗಿ ಪೂರೈಸಲಾಗುತ್ತಿತ್ತು.

## 3. ಹೊಸ ಆರ್ಥಿಕ ನೀತಿ

ಹೊಸ ಆರ್ಥಿಕ ನೀತಿ (ಎನ್ಇಪಿ) ಅನ್ನು ಜುಲೈ 1991 ರಲ್ಲಿ ಘೋಷಿಸಲಾಯಿತು. ಇದು ವ್ಯಾಪಕ ಶ್ರೇಣಿಯ ಆರ್ಥಿಕ ಸುಧಾರಣೆಗಳನ್ನು ಒಳಗೊಂಡಿತ್ತು. ಆರ್ಥಿಕತೆಯಲ್ಲಿ ಹೆಚ್ಚು ಸ್ಪರ್ಧಾತ್ಮಕ ವಾತಾವರಣವನ್ನು ಸೃಷ್ಟಿಸುವುದು ಮತ್ತು ಸಂಸ್ಥೆಗಳ ಪ್ರವೇಶ ಮತ್ತು ಬೆಳವಣಿಗೆಗೆ ಇರುವ ಅಡೆತಡೆಗಳನ್ನು ತೆಗೆದುಹಾಕುವುದು ನೀತಿಯ ಮುಖ್ಯ ಉದ್ದೇಶವಾಗಿತ್ತು.

ಹೊಸ ಆರ್ಥಿಕ ನೀತಿಯನ್ನು ಜುಲೈ 1991 ರಲ್ಲಿ ಘೋಷಿಸಲಾಯಿತು. ಇದನ್ನು ವಿಶಾಲವಾಗಿ ಎರಡು ರೀತಿಯ ಕ್ರಮಗಳಾಗಿ ವಿಂಗಡಿಸಬಹುದು;

**1. ಸ್ಥಿರತೆಯನ್ನು ತರುವ ಕ್ರಮಗಳು:** ಅವು ಈ ಕೆಳಗಿನ ಅಲ್ಪಾವಧಿಯ ಕ್ರಮಗಳನ್ನು ಉಲ್ಲೇಖಿಸುತ್ತವೆ:

(i) ಸಾಕಷ್ಟು ವಿದೇಶಿ ವಿನಿಮಯ ಮೀಸಲು ಕಾಪಾಡಿಕೊಳ್ಳುವ ಮೂಲಕ ಸಂದಾಯದ ಅಂತರದ (ಬಿಓಪಿ) ಕೊರತೆಯನ್ನು ಸರಿಪಡಿಸುವುದು; ಮತ್ತು

(ii) ಏರುತ್ತಿರುವ ಬೆಲೆಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಹಣದುಬ್ಬರವನ್ನು ನಿಯಂತ್ರಿಸುವುದು.

**2. ರಚನಾತ್ಮಕ ಸುಧಾರಣಾ ಕ್ರಮಗಳು:** ಅವು ಈ ಕೆಳಗಿನ ದೀರ್ಘಕಾಲೀನ ಕ್ರಮಗಳನ್ನು ಉಲ್ಲೇಖಿಸುತ್ತವೆ;

(i) ಆರ್ಥಿಕತೆಯ ಸಾಮರ್ಥ್ಯವನ್ನು ಸುಧಾರಿಸುವುದು; ಮತ್ತು

(ii) ಭಾರತೀಯ ಆರ್ಥಿಕತೆಯ ವಿವಿಧ ವಿಭಾಗಗಳಲ್ಲಿನ ನಿಷ್ಠುರತೆಗಳನ್ನು ತೆಗೆದುಹಾಕುವ ಮೂಲಕ ಅಂತರರಾಷ್ಟ್ರೀಯ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು.

(iii) ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಉತ್ಪನ್ನಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು.

**ಹೊಸ ಆರ್ಥಿಕ ನೀತಿಯ ಮುಖ್ಯ ಲಕ್ಷಣಗಳು**

ಸರ್ಕಾರವು ಮೂರು ವಿಭಿನ್ನ ಶೀರ್ಷಿಕೆಗಳ ಅಡಿಯಲ್ಲಿ ತನ್ನ ಅರ್ಥಿಕ ನೀತಿಯಲ್ಲಿನ ಬದಲಾವಣೆಗಳನ್ನು ಪ್ರಾರಂಭಿಸಿತು:

1. ಉದಾರೀಕರಣ
2. ಖಾಸಗೀಕರಣ
3. ಜಾಗತೀಕರಣ

## 4. ಉದಾರೀಕರಣ

1991 ಕ್ಕಿಂತಲೂ ಮೊದಲು ಕೈಗಾರಿಕೆಗಳ ಸ್ಥಾಪನೆ, ಆಮದು ಮತ್ತು ರಫ್ತು ವಹಿವಾಟು, ವಿದೇಶಿ ವಿನಿಮಯ ವ್ಯವಹಾರಗಳು ಇತ್ಯಾದಿಗಳಿಗೆ ಪರವಾನಗಿ ಅಗತ್ಯದ ವಿಷಯದಲ್ಲಿ ಭಾರತದಲ್ಲಿ ಹೆಚ್ಚಿನ ಸಂಖ್ಯೆಯ ಸರ್ಕಾರಿ ನಿರ್ಬಂಧಗಳು ಇದ್ದವು. ಜುಲೈ 1991 ರಲ್ಲಿ, ಆರ್ಥಿಕ ಸುಧಾರಣೆಗಳ ಪ್ಯಾಕೇಜ್ ಘೋಷಿಸಲಾಯಿತು, ಇದನ್ನು ಭಾರತದಲ್ಲಿ "ಉದಾರೀಕರಣ" ಪ್ರಕ್ರಿಯೆಯ ಪ್ರಾರಂಭ ಎಂದು ಗುರುತಿಸಲಾಗಿದೆ. ***ಉದಾರೀಕರಣ ಎಂದರೆ ಖಾಸಗಿ ವಲಯದ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವುದು.*** ಬೇರೆ ರೀತಿಯಲ್ಲಿ ಹೇಳುವುದಾದರೆ, ವ್ಯಾಪಾರ ಮತ್ತು

ಉದ್ಯಮವನ್ನು ಅನಗತ್ಯ ಸರ್ಕಾರದ ನಿಯಂತ್ರಣಗಳು ಮತ್ತು ನಿರ್ಬಂಧಗಳಿಂದ ಮುಕ್ತಗೊಳಿಸುವುದನ್ನು ಇದು ಸೂಚಿಸುತ್ತದೆ.

ಉದಾರೀಕರಣವು ಎರಡು ವಿಷಯಗಳನ್ನು ಒಳಗೊಂಡಿದೆ:

(i) ಖಾಸಗಿ ವಲಯಕ್ಕೆ ಸಂಬಂಧಿಸಿದ ನಿಯಮಗಳು ಮತ್ತು ನಿಯಂತ್ರಣಗಳಲ್ಲಿ ಸಡಿಲತೆ.

(ii) ಈ ಹಿಂದೆ ಸಾರ್ವಜನಿಕ ವಲಯಕ್ಕೆ ಮೀಸಲಾಗಿದ್ದ ಕೈಗಾರಿಕೆಗಳನ್ನು ನಡೆಸಲು ಖಾಸಗಿ ವಲಯಕ್ಕೆ ಅವಕಾಶ ನೀಡುವುದು.

ಉದಾರೀಕರಣದ ಉದ್ದೇಶವು ಖಾಸಗಿ ವಲಯ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಹೂಡಿಕೆ ಮಾಡಲು ಮತ್ತು ವಿಸ್ತರಿಸಲು ಪ್ರೋತ್ಸಾಹಿಸುವ ಮೂಲಕ ದೇಶದ ಆರ್ಥಿಕ ಸಾಮರ್ಥ್ಯದಲ್ಲಿನ ಬಿಗುವನ್ನು ಕಡಿಮೆ ಮಾಡುವುದು ಮತ್ತು ಆರ್ಥಿಕತೆಗೆ ಹೆಚ್ಚಿನ ಸ್ಪರ್ಧೆಯನ್ನು ಪರಿಚಯಿಸುವುದು ಮತ್ತು ಕಾರ್ಯಾಚರಣೆಗಳ ದಕ್ಷತೆಯನ್ನು ಹೆಚ್ಚಿಸಲು ಪ್ರೋತ್ಸಾಹವನ್ನು ನೀಡುವುದಾಗಿರತ್ತದೆ. ಇದು ದೇಶದ ಸಾಲದ ಹೊರೆಯನ್ನು ಮತ್ತಷ್ಟು ಕಡಿಮೆ ಮಾಡುತ್ತದೆ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಿಂದ ಬಂಡವಾಳ ಸರಕು ಮತ್ತು ಯಂತ್ರೋಪಕರಣಗಳಿಗೆ ಆಮದು ಮಾರ್ಗವನ್ನು ಬಳಸುತ್ತದೆ.

ಉದಾರೀಕರಣದ ಅಡಿಯಲ್ಲಿ ಸರ್ಕಾರ ಕೈಗೊಂಡ ಆರ್ಥಿಕ ಸುಧಾರಣೆಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

(i) ಕೈಗಾರಿಕಾ ವಲಯದ ಸುಧಾರಣೆಗಳು

(ii) ಹಣಕಾಸು ವಲಯದ ಸುಧಾರಣೆಗಳು

(iii) ತೆರಿಗೆ ಸುಧಾರಣೆಗಳು

(iv) ವಿದೇಶಿ ವಿನಿಮಯದ ಸುಧಾರಣೆಗಳು

(v) ವ್ಯಾಪಾರ ಮತ್ತು ಹೂಡಿಕೆ ನೀತಿಯ ಸುಧಾರಣೆಗಳು

### 4.1 ಕೈಗಾರಿಕಾ ವಲಯದ ಸುಧಾರಣೆಗಳು

ಕೈಗಾರಿಕಾ ವಲಯದಲ್ಲಿ ಅಗತ್ಯ ಸುಧಾರಣೆಗಳನ್ನು ಮಾಡಲು ಸರ್ಕಾರವು ಜುಲೈ 24, 1991 ರಂದು ಹೊಸ ಕೈಗಾರಿಕಾ ನೀತಿಯನ್ನು ಪರಿಚಯಿಸಿತು. *ಕೈಗಾರಿಕಾ ನೀತಿಯ ಸುಧಾರಣೆಗಳ ಅಡಿಯಲ್ಲಿ ಈ ಕೆಳಗಿನ ವಿವಿಧ ಕ್ರಮಗಳು ಸೇರಿವೆ;*

1. **ಕೈಗಾರಿಕಾ ಪರವಾನಗಿಯಲ್ಲಿನ ಕಡಿತ:** ಹೊಸ ನೀತಿಯು ಕೈಗಾರಿಕೆಗಳ ಕಿರುಪಟ್ಟಿಯನ್ನು ಹೊರತುಪಡಿಸಿ (ಮದ್ಯ, ಸಿಗರೇಟ್, ಅಪಾಯಕಾರಿ ರಾಸಾಯನಿಕಗಳು, ರಕ್ಷಣಾ ಉಪಕರಣಗಳು, ಕೈಗಾರಿಕಾ ಸ್ಫೋಟಕಗಳು ಇತ್ಯಾದಿ) ಎಲ್ಲಾ ಕೈಗಾರಿಕೆಗಳಿಗೆ ಕೈಗಾರಿಕಾ ಪರವಾನಗಿಯನ್ನು ರದ್ದುಗೊಳಿಸಿತು. (i) ಹೊಸ ಘಟಕಗಳನ್ನು ಸ್ಥಾಪಿಸಲು ಯಾವುದೇ ಪರವಾನಗಿಗಳ ಅಗತ್ಯವಿಲ್ಲ; ಅಥವಾ (ii) ಅಸ್ತಿತ್ವದಲ್ಲಿರುವ ಉತ್ಪಾದನಾ ವಿಧಾನವನ್ನು ವಿಸ್ತರಿಸುವುದು ಅಥವಾ ಬೇರೆ ಮಾಡುವುದು. ಆದಾಗ್ಯೂ, ಭದ್ರತೆ ಮತ್ತು ಕಾರ್ಯತಂತ್ರದ ಪರಿಗಣನೆಗಳಿಗೆ ಸಂಬಂಧಿಸಿದ ಕೆಲವು ಕೈಗಾರಿಕೆಗಳಿಗೆ ಪರವಾನಗಿ ಅಗತ್ಯವಾಗಿತ್ತು.
2. **ಸಾರ್ವಜನಿಕ ವಲಯದ ಪಾತ್ರವನ್ನು ಕಡಿಮೆ ಮಾಡುವುದು:** ದೇಶದ ಕೈಗಾರಿಕಾ ಅಭಿವೃದ್ಧಿಯಲ್ಲಿ ಸಾರ್ವಜನಿಕ ವಲಯದ ಪಾತ್ರವನ್ನು ಕಡಿಮೆ ಮಾಡುವುದು ಒಂದು ಪ್ರಮುಖ ಲಕ್ಷಣವಾಗಿದೆ. ಸಾರ್ವಜನಿಕ ವಲಯಕ್ಕೆ ಮಾತ್ರ ಮೀಸಲಾಗಿರುವ ಕೈಗಾರಿಕೆಗಳ ಸಂಖ್ಯೆಯನ್ನು 17 ರಿಂದ 8 ಕ್ಕೆ ಇಳಿಸಲಾಯಿತು.
3. **ಸಣ್ಣ ಕೈಗಾರಿಕೆಗಳ ಅಡಿಯಲ್ಲಿ ಸುಧಾರಣೆಗಳು:** ಸಣ್ಣ ಕೈಗಾರಿಕೆಗಳಿಂದ ಉತ್ಪಾದಿಸಲ್ಪಟ್ಟ ಅನೇಕ ಸರಕುಗಳನ್ನು ಈಗ ಕಾಯ್ದಿರಿಸಲಾಗಿದೆ. ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಮಿತಿಯನ್ನು ಐದು ಕೋಟಿ ರೂ.ಗಳಿಗೆ ಹೆಚ್ಚಿಸುವ ಮೂಲಕ ಇದನ್ನು ಸಾಧ್ಧಿಸಲಾಯಿತು. ಸರ್ಕಾರವು ನಿರ್ಧರಿಸುವ ಬದಲು ಅನೇಕ ಕೈಗಾರಿಕೆಗಳಲ್ಲಿನ ಬೆಲೆಗಳನ್ನು ನಿರ್ಧರಿಸಲು ಮಾರುಕಟ್ಟೆ ಪಡೆಗಳಿಗೆ ಅವಕಾಶ ನೀಡಲಾಯಿತು.
4. **ಏಕಸ್ವಾಮ್ಯ ಮತ್ತು ನಿರ್ಬಂಧಿತ ವ್ಯಾಪಾರ ಅಭ್ಯಾಸಗಳು (ಎಂಆರ್‌ಟಿಪಿ) ಕಾಯಿದೆ:** ಹಿಂದಿನ ಉತ್ಪಾದನಾ ಸಾಮರ್ಥ್ಯವು ಪರವಾನಗಿಯೊಂದಿಗೆ ಸಂಬಂಧ ಹೊಂದಿತ್ತು. ಉದಾರೀಕರಣ ಮತ್ತು ವಿಸ್ತರಣಾ ಯೋಜನೆಗಳ ಪರಿಚಯದೊಂದಿಗೆ ದೊಡ್ಡ ಕಂಪನಿಗಳು, ವಿಸ್ತರಣೆಗೆ ಪೂರ್ವ ಅನುಮೋದನೆ ಪಡೆಯುವುದು, ಹೊಸ ಉದ್ಯಮಗಳ ಸ್ಥಾಪನೆ, ವಿಲೀನ, ಸಂಯೋಜನೆ ಇತ್ಯಾದಿಗಳ ಅಗತ್ಯತೆಯನ್ನು ತೆಗೆದುಹಾಕಲಾಯಿತು. ಈಗ ಉತ್ಪಾದನಾಕಾರರು ಮಾರುಕಟ್ಟೆ ಪರಿಸ್ಥಿತಿಗಳಿಗೆ ಅನುಗುಣವಾಗಿ ತಮ್ಮ ಸ್ವಂತ ಇಚ್ಛೆಯಂತೆ ತಮ್ಮ ವ್ಯವಹಾರವನ್ನು ವಿಸ್ತರಿಸಬಹುದಾಗಿದೆ. 2002 ರಲ್ಲಿ, ಎಂಆರ್‌ಟಿಪಿ ಕಾಯಿದೆಯನ್ನು ಸ್ಪರ್ಧಾ ಕಾಯ್ದೆ 2002 ರಿಂದ ಬದಲಾಯಿಸಲಾಗಿದೆ, ಅದು ಹೆಚ್ಚು ಉದಾರವಾಗಿದೆ.

### 4.2 ಹಣಕಾಸು ವಲಯದ ಸುಧಾರಣೆಗಳು

ಹಣಕಾಸು ವಲಯವು ವಾಣಿಜ್ಯ ಬ್ಯಾಂಕುಗಳು, ಹೂಡಿಕೆ ಬ್ಯಾಂಕುಗಳು, ಷೇರು ವಿನಿಮಯ ಕಾರ್ಯಾಚರಣೆಗಳು ಮತ್ತು ವಿದೇಶಿ ವಿನಿಮಯ ಮಾರುಕಟ್ಟೆಯಂತಹ ಹಣಕಾಸು ಸಂಸ್ಥೆಗಳನ್ನು ಒಳಗೊಂಡಿದೆ. ಭಾರತದ ಹಣಕಾಸು ಕ್ಷೇತ್ರವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಯಂತ್ರಿಸುತ್ತದೆ. ಆರ್‌ಬಿಐ ಪಾತ್ರವನ್ನು ನಿಯಂತ್ರಕದಿಂದ ಹಣಕಾಸು

ವಲಯದ ಸೌಲಭ್ಯಕಾರನ ಸ್ಥಾನಕ್ಕೆ ಇಳಿಸಲಾಯಿತು. ಉದಾಹರಣೆಗೆ, 1991 ರವರೆಗೆ ಸಾಲ ಮತ್ತು ಠೇವಣಿಗಳ ಮೇಲಿನ ಬ್ಯಾಂಕುಗಳ ಬಡ್ಡಿದರಗಳನ್ನು ಆರ್‌ಬಿಐ ನಿರ್ಧರಿಸುತ್ತಿತ್ತು. ಹೀಗಾಗಿ, ಅನೇಕ ವಿಷಯಗಳಲ್ಲಿ ಆರ್‌ಬಿಐಯೊನ್ನು ಸಂಪರ್ಕಿಸದೆ ನಿರ್ಧಾರ ತೆಗೆದುಕೊಳ್ಳಲು ಹಣಕಾಸು ಕ್ಷೇತ್ರಕ್ಕೆ ಅವಕಾಶ ನೀಡಲಾಯಿತು. ಸುಧಾರಣಾ ನೀತಿಗಳು ಖಾಸಗಿ ವಲಯದ ಬ್ಯಾಂಕುಗಳು, ಭಾರತೀಯ ಮತ್ತು ವಿದೇಶಿ ಬ್ಯಾಂಕುಗಳ ಸ್ಥಾಪನೆಗೆ ಕಾರಣವಾಯಿತು. ಉದಾಹರಣೆಗೆ, ಭಾರತೀಯ ಬ್ಯಾಂಕುಗಳಾದ ಐಸಿಐಸಿಐ ಮುಂತಾದುವು ಮತ್ತು ಎಚ್‌ಎಸ್‌ಬಿಸಿಯಂತಹ ವಿದೇಶಿ ಬ್ಯಾಂಕುಗಳು ಸ್ಪರ್ಧೆಯನ್ನು ಹೆಚ್ಚಿಸಿ ಕಡಿಮೆ ಬಡ್ಡಿದರಗಳು ಮತ್ತು ಉತ್ತಮ ಸೇವೆಗಳ ಮೂಲಕ ಗ್ರಾಹಕರಿಗೆ ಪ್ರಯೋಜನವನ್ನು ನೀಡಿದವು.

ಬ್ಯಾಂಕುಗಳಲ್ಲಿನ ವಿದೇಶಿ ಹೂಡಿಕೆಯ ಮಿತಿಯನ್ನು ಶೇಕಡಾ 50 ಕ್ಕೆ ಏರಿಸಲಾಯಿತು. ಮರ್ಚೆಂಟ್ ಬ್ಯಾಂಕರ್‌ಗಳು, ಮ್ಯೂಚುವಲ್ ಫಂಡ್‌ಗಳು ಮತ್ತು ಪಿಂಚಣಿ ನಿಧಿಗಳಂತಹ ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಗೆ (ಎಫ್‌ಐಐ) ಈಗ ಭಾರತೀಯ ಹಣಕಾಸು ಮಾರುಕಟ್ಟೆಗಳಲ್ಲಿ ಹೂಡಿಕೆ ಮಾಡಲು ಅವಕಾಶವಿದೆ. ಭಾರತ ಮತ್ತು ವಿದೇಶದಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಬ್ಯಾಂಕುಗಳಿಗೆ ಅನುಮತಿ ನೀಡಲಾಗಿದ್ದರೂ, ಖಾತೆದಾರರು ಮತ್ತು ರಾಷ್ಟ್ರದ ಹಿತಾಸಕ್ತಿಗಳನ್ನು ಕಾಪಾಡಲು ಕೆಲವು ಅಧಿಕಾರಗಳನ್ನು ಆರ್‌ಬಿಐನೊಂದಿಗೆ ಉಳಿಸಿಕೊಳ್ಳಲಾಗಿದೆ. ಆರ್‌ಬಿಐ ಅನುಮೋದನೆ ಪಡೆಯದೆ ಹೊಸ ಶಾಖೆಗಳನ್ನು ಸ್ಥಾಪಿಸಲು (ಕೆಲವು ಷರತ್ತುಗಳನ್ನು ಪೂರೈಸಿದ ನಂತರ) ಬ್ಯಾಂಕುಗಳಿಗೆ ಸ್ವಾತಂತ್ರ್ಯ ನೀಡಲಾಯಿತು. ಈಗ ದೇಶದ ಪ್ರತಿಯೊಂದು ಮೂಲೆಯಲ್ಲೂ ಬ್ಯಾಂಕಿಂಗ್ ಸೇವೆಗಳು ಲಭ್ಯವಿದೆ.

**4.3 ತೆರಿಗೆ ಸುಧಾರಣೆಗಳು**

ತೆರಿಗೆ ಸುಧಾರಣೆಗಳು ಸರ್ಕಾರದ ತೆರಿಗೆ ಮತ್ತು ಸಾರ್ವಜನಿಕ ಖರ್ಚು ನೀತಿಗಳಲ್ಲಿನ ಸುಧಾರಣೆಗಳನ್ನು ಉಲ್ಲೇಖಿಸುತ್ತವೆ, ಅವುಗಳನ್ನು ಒಟ್ಟಾರೆಯಾಗಿ ಅದರ 'ಹಣಕಾಸು ನೀತಿ' ಎಂದು ಕರೆಯಲಾಗುತ್ತದೆ.

**ತೆರಿಗೆಗಳಲ್ಲಿ ಎರಡು ವಿಧಗಳಿವೆ:**

(i) **ನೇರ ತೆರಿಗೆಗಳು** ಒಂದೇ ವ್ಯಕ್ತಿಯ ಮೇಲೆ ಹೊರೆ ಹೇರುವ ತೆರಿಗೆಗಳಾಗಿವೆ. ಇವು ವ್ಯಕ್ತಿಗಳ ಆದಾಯದ ಮೇಲಿನ ತೆರಿಗೆಗಳು ಮತ್ತು ವ್ಯಾಪಾರ ಉದ್ಯಮಗಳ ಲಾಭವನ್ನು ಒಳಗೊಂಡಿರುತ್ತವೆ. ಉದಾಹರಣೆಗೆ, ಆದಾಯ ತೆರಿಗೆ (ವೈಯಕ್ತಿಕ ಆದಾಯದ ಮೇಲಿನ ತೆರಿಗೆಗಳು) ಮತ್ತು ಕಾರ್ಪೊರೇಟ್ ತೆರಿಗೆ (ಕಂಪನಿಗಳ ಲಾಭದ ಮೇಲಿನ ತೆರಿಗೆಗಳು). ಈ ತೆರಿಗೆಗಳ ಭಾರವನ್ನು ಸ್ಥಳಾಂತರಿಸಲಾಗುವುದಿಲ್ಲ.

(ii) **ಪರೋಕ್ಷ ತೆರಿಗೆಗಳು** ಎರಡು ವಿಭಿನ್ನ ಜನರ ಮೇಲೆ ಹೊರೆ ಹೇರುವ ತೆರಿಗೆಗಳನ್ನು ಉಲ್ಲೇಖಿಸುತ್ತವೆ. ಇವುಗಳು ತಮ್ಮ ಬಳಕೆಯ ವೆಚ್ಚದ ಮೂಲಕ ವ್ಯಕ್ತಿಗಳ ಆದಾಯದ ಮೇಲೆ ಪರಿಣಾಮ ಬೀರುತ್ತವೆ. ಸರಕು ಮತ್ತು ಸೇವೆಗಳ ಮೇಲೆ ಪರೋಕ್ಷ ತೆರಿಗೆಗಳನ್ನು ಸಾಮಾನ್ಯವಾಗಿ ವಿಧಿಸಲಾಗುತ್ತದೆ. ಉದಾಹರಣೆಗೆ, ಮಾರಾಟ ತೆರಿಗೆ, ವ್ಯಾಟ್, ಆಮದು ರಫ್ತು ಸುಂಕ (ಕಸ್ಟಮ್ ಡ್ಯೂಟಿ), ಇತ್ಯಾದಿ ತೆರಿಗೆಗಳ ಭಾರವನ್ನು ಬದಲಾಯಿಸಬಹುದು.

ಮಾಡಲಾದ ಪ್ರಮುಖ ತೆರಿಗೆ ಸುಧಾರಣೆಗಳು:

**1. ತೆರಿಗೆಗಳಲ್ಲಿನ ಕಡಿತ:** 1991 ರಿಂದೀಚೆಗೆ ಆದಾಯ ಮತ್ತು ಸಾಂಸ್ಥಿಕ ತೆರಿಗೆಯಲ್ಲಿ ನಿರಂತರ ಇಳಿಕೆ ಕಂಡುಬಂದಿದೆ, ಏಕೆಂದರೆ ಹೆಚ್ಚಿನ ತೆರಿಗೆ ದರಗಳು ತೆರಿಗೆ ವಂಚನೆಗೆ ಒಂದು ಪ್ರಮುಖ ಕಾರಣವಾಗಿದೆ. ಆದಾಯ ತೆರಿಗೆಯ ಮಧ್ಯಮ ದರಗಳು ಉಳಿತಾಯ ಮತ್ತು ಆದಾಯವನ್ನು ಸ್ವಯಂಪ್ರೇರಿತವಾಗಿ ಬಹಿರಂಗಪಡಿಸುವುದನ್ನು ಪ್ರೋತ್ಸಾಹಿಸುತ್ತದೆ ಎಂದು ಈಗ ವ್ಯಾಪಕವಾಗಿ ಒಪ್ಪಿಕೊಳ್ಳಲಾಗಿದೆ.

**2. ಪರೋಕ್ಷ ತೆರಿಗೆಗಳಲ್ಲಿನ ಸುಧಾರಣೆಗಳು:** ಸರಕು ಮತ್ತು ವ್ಯಾಪಾರ ವಸ್ತುಗಳಿಗೆ ಸಾಮಾನ್ಯ ರಾಷ್ಟ್ರೀಯ ಮಾರುಕಟ್ಟೆಯನ್ನು ಸ್ಥಾಪಿಸಲು ಅನುಕೂಲವಾಗುವಂತೆ ಪರೋಕ್ಷ ತೆರಿಗೆಗಳಲ್ಲಿ ಸಾಕಷ್ಟು ಸುಧಾರಣೆಗಳನ್ನು ಮಾಡಲಾಗಿದೆ. ದೇಶದ ಎಲ್ಲಾ ರಾಜ್ಯಗಳಲ್ಲಿ ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಏಕರೂಪವಾಗಿ ಅನ್ವಯವಾಗುವಂತೆ ಮಾಡಲು ಪ್ರಯತ್ನಿಸಲಾಗುತ್ತಿದೆ. ಅಂತಿಮವಾಗಿ ಜಿಎಸ್‌ಟಿ 2017 ರ ಜುಲೈ 1 ರಂದು ಜಾರಿಗೆ ಬಂದಿತು.

**3. ಪ್ರಕ್ರಿಯೆಯ ಸರಳೀಕರಣ:** ತೆರಿಗೆದಾರರ ಕಡೆಯಿಂದ ಉತ್ತಮ ಅನುಸರಣೆಯನ್ನು ಉತ್ತೇಜಿಸುವ ಸಲುವಾಗಿ, ಅನೇಕ ಕಾರ್ಯವಿಧಾನಗಳನ್ನು ಸರಳೀಕರಿಸಲಾಗಿದೆ. 1991 ಕ್ಕಿಂತ ಮೊದಲು, ರಿಟರ್ನ್ ಸಲ್ಲಿಕೆಗೆ ಸಾಕಷ್ಟು ವಿಧಿವಿಧಾನಗಳು ಇದ್ದುದರಿಂದ ಒಬ್ಬ ವ್ಯಕ್ತಿಯು ಸ್ವಂತವಾಗಿ ಸಲ್ಲಿಸುವುದು ಕಷ್ಟವಾಗಿದ್ದುದರಿಂದ ತೆರಿಗೆದಾರರು ತೆರಿಗೆ ರಿಟರ್ನ್ ಸಲ್ಲಿಸಲು ಹಿಂಜರಿಯುತ್ತಿದ್ದರು.

### 4.4 ವಿದೇಶಿ ವಿನಿಮಯ ಸುಧಾರಣೆಗಳು

ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಮಾಡಿದ ಪ್ರಮುಖ ಸುಧಾರಣೆಗಳು;

- **ರೂಪಾಯಿಯ ಅಪಮೌಲ್ಯೀಕರಣ:** ಅಪಮೌಲ್ಯೀಕರಣವು ಸರ್ಕಾರವು ವಿದೇಶಿ ಕರೆನ್ಸಿಯ ವಿಷಯದಲ್ಲಿ ದೇಶೀಯ ಕರೆನ್ಸಿಯ ಮೌಲ್ಯವನ್ನು ಕಡಿಮೆ ಮಾಡುವುದನ್ನು ಸೂಚಿಸುತ್ತದೆ. ಪಾವತಿಗಳ ಬಾಕಿ ಬಿಕ್ಕಟ್ಟನ್ನು ನಿವಾರಿಸಲು, ವಿದೇಶಿ ಕರೆನ್ಸಿಗಳ ವಿರುದ್ಧ ರೂಪಾಯಿ ಮೌಲ್ಯವನ್ನು ಅಪಮೌಲ್ಯಗೊಳಿಸಲಾಯಿತು. ಇದು ವಿದೇಶಿ ವಿನಿಮಯದ ಒಳಹರಿವು ಹೆಚ್ಚಿಸಲು ಕಾರಣವಾಯಿತು. ರೂಪಾಯಿ ಮೌಲ್ಯವನ್ನು ತನ್ನ ನಿಯಂತ್ರಣದಿಂದ ಮುಕ್ತಗೊಳಿಸಲು

ಸರ್ಕಾರ ಅವಕಾಶ ನೀಡಿತು. ಇದರ ಪರಿಣಾಮವಾಗಿ, ಬೇಡಿಕೆ ಮತ್ತು ಪೂರೈಕೆಯ ಮಾರುಕಟ್ಟೆ ಶಕ್ತಿಗಳು ವಿದೇಶಿ ಕರೆನ್ಸಿಯ ದೃಷ್ಟಿಯಿಂದ ಭಾರತೀಯ ರೂಪಾಯಿಯ ವಿನಿಮಯ ಮೌಲ್ಯವನ್ನು ನಿರ್ಧರಿಸುತ್ತವೆ.

## 5. ವ್ಯಾಪಾರ ಮತ್ತು ಹೂಡಿಕೆ ನೀತಿ ಸುಧಾರಣೆಗಳು

1991 ಕ್ಕೂ ಮೊದಲು ದೇಶೀಯ ಕೈಗಾರಿಕೆಗಳನ್ನು ರಕ್ಷಿಸಲು ಆಮದಿಗೆ ಸಾಕಷ್ಟು ನಿರ್ಬಂಧಗಳನ್ನು ವಿಧಿಸಲಾಗಿತ್ತು. ಆದಾಗ್ಯೂ, ಈ ರಕ್ಷಣೆಯು ದೇಶೀಯ ಕೈಗಾರಿಕೆಗಳ ದಕ್ಷತೆ ಮತ್ತು ಸ್ಪರ್ಧಾತ್ಮಕತೆಯನ್ನು ಕಡಿಮೆ ಮಾಡಿತು ಮತ್ತು ಇದು ನಿಧಾನಗತಿಯ ಬೆಳವಣಿಗೆಗೆ ಕಾರಣವಾಯಿತು. ಆದ್ದರಿಂದ ಕೈಗಾರಿಕಾ ಉತ್ಪಾದನೆಯಲ್ಲಿ ಅಂತರರಾಷ್ಟ್ರೀಯ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು, ವಿದೇಶಿ ಹೂಡಿಕೆ ಮತ್ತು ತಂತ್ರಜ್ಞಾನವನ್ನು ಆರ್ಥಿಕತೆಗೆ ಉತ್ತೇಜಿಸಲು, ದೇಶೀಯ ಕೈಗಾರಿಕೆಗಳ ದಕ್ಷತೆಯನ್ನು ಉತ್ತೇಜಿಸಲು ಮತ್ತು ಇತ್ತೀಚಿನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಮತ್ತು ಈಕ್ವಿಟಿಯಲ್ಲಿ ಹೆಚ್ಚಿನ ಪಾಲನ್ನು ಹೊಂದಲು ವಿದೇಶಿ ಹೂಡಿಕೆದಾರರಿಗೆ ಸ್ವಾತಂತ್ರ್ಯವನ್ನು ನೀಡಲು ವ್ಯಾಪಾರ ಮತ್ತು ಹೂಡಿಕೆಯ ಸುಧಾರಣೆಗಳನ್ನು ಪ್ರಾರಂಭಿಸಲಾಯಿತು.

ಪ್ರಮುಖ ವ್ಯಾಪಾರ ಮತ್ತು ಹೂಡಿಕೆ ನೀತಿ ಸುಧಾರಣೆಗಳಲ್ಲಿ ಇವು ಸೇರಿವೆ:

(i) **ಆಮದು ಮತ್ತು ರಫ್ತುಗಳ ಮೇಲಿನ ಪರಿಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕುವುದು:** ಹೊಸ ಆರ್ಥಿಕ ನೀತಿಯ ಅಡಿಯಲ್ಲಿ ಆಮದು ಮತ್ತು ರಫ್ತುಗಳ ಮೇಲಿನ ಪರಿಮಾಣಾತ್ಮಕ ನಿರ್ಬಂಧಗಳನ್ನು ಬಹಳವಾಗಿ ಕಡಿಮೆ ಮಾಡಲಾಗಿದೆ. ಉದಾಹರಣೆಗೆ, ತಯಾರಾದ ಗ್ರಾಹಕ ವಸ್ತುಗಳು ಮತ್ತು ಕೃಷಿ ಉತ್ಪನ್ನಗಳ ಆಮದಿನ ಮೇಲಿನ ಪರಿಮಾಣಾತ್ಮಕ ನಿರ್ಬಂಧಗಳನ್ನು ಏಪ್ರಿಲ್ 2001 ರಿಂದ ಸಂಪೂರ್ಣವಾಗಿ ತೆಗೆದುಹಾಕಲಾಗಿದೆ.

(ii) **ರಫ್ತು ಸುಂಕಗಳನ್ನು ತೆಗೆಯುವುದು:** ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ಸರಕುಗಳ ಸ್ಪರ್ಧೆಯನ್ನು ಹೆಚ್ಚಿಸಲು ರಫ್ತು ಸುಂಕವನ್ನು ತೆಗೆದುಹಾಕಲಾಗಿದೆ.

(iii) **ಆಮದು ಸುಂಕಗಳಲ್ಲಿನ ಕಡಿತ:** ವಿದೇಶಿ ಮಾರುಕಟ್ಟೆಯಲ್ಲಿ ದೇಶೀಯ ಸರಕುಗಳ ಸ್ಥಾನವನ್ನು ಸುಧಾರಿಸಲು ಆಮದು ಸುಂಕವನ್ನು ಕಡಿಮೆ ಮಾಡಲಾಗಿದೆ. ದೇಶೀಯ ಕೈಗಾರಿಕೆಗಳಿಗೆ ರಕ್ಷಣೆಯ ನೀತಿಯನ್ನು ಈಗ ಕೈಬಿಡಲಾಗಿದೆ. ರಫ್ತು ಪ್ರಚಾರ ಮತ್ತು ಆಮದು ಪರ್ಯಾಯಕ್ಕೆ ಒತ್ತು ನೀಡುವಲ್ಲಿ ಸ್ಪಷ್ಟ ಬದಲಾವಣೆಯಾಗಿದೆ.

(iv) **ಆಮದು ಪರವಾನಗಿ ವ್ಯವಸ್ಥೆಯಲ್ಲಿ ವಿನಾಯಿತಿ:** ಅಪಾಯಕಾರಿ ಮತ್ತು ಪರಿಸರ ಸೂಕ್ಷ್ಮ ಕೈಗಾರಿಕೆಗಳನ್ನು ಹೊರತುಪಡಿಸಿ ಆಮದು ಪರವಾನಗಿಯನ್ನು ರದ್ದುಪಡಿಸಲಾಗಿದೆ. ಇದು ದೇಶೀಯ ಕೈಗಾರಿಕೆಗಳಿಗೆ ಉತ್ತಮ ಬೆಲೆಗೆ ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಉತ್ತೇಜನ ನೀಡಿತು, ಇದು ಅವುಗಳ ದಕ್ಷತೆಯನ್ನು ಹೆಚ್ಚಿಸಿತು ಮತ್ತು ಅವುಗಳನ್ನು ಹೆಚ್ಚು ಸ್ಪರ್ಧಾತ್ಮಕವಾಗಿಸಿತು.

## 6. ಸಾರಾಂಶ

1991 ಕ್ಕಿಂತ ಮೊದಲು ಭಾರತೀಯ ಆರ್ಥಿಕತೆಯು ಕುಸಿಯುತ್ತಿರುವ ವಿದೇಶಿ ವಿನಿಮಯ ಮೀಸಲು, ಆಮದು ಮತ್ತು ರಫ್ತಿನ ನಡುವಿನ ಹೆಚ್ಚಿದ ಅಂತರ ಮತ್ತು ಹೆಚ್ಚಿನ ಹಣದುಬ್ಬರದ ಸಮಸ್ಯೆಗಳನ್ನು ಎದುರಿಸುತ್ತಿತ್ತು. ಹಣಕಾಸಿನ ಬಿಕ್ಕಟ್ಟು ಮತ್ತು ಐಎಂಎಫ್ ಮತ್ತು ವಿಶ್ವಬ್ಯಾಂಕ್‌ನಂತಹ ಅಂತಾರಾಷ್ಟ್ರೀಯ ಸಂಸ್ಥೆಗಳ ಒತ್ತಡದಿಂದಾಗಿ 1991 ರಲ್ಲಿ ನೀತಿ ನಿರೂಪಕರನ್ನು ತನ್ನ ಅರ್ಥಶಾಸ್ತ್ರ ನೀತಿಗಳನ್ನು ಬದಲಾಯಿಸುವಂತೆ ಅದು ಒತ್ತಾಯಿಸಿತು. ಕೈಗಾರಿಕಾ ಮತ್ತು ಹಣಕಾಸು ಕ್ಷೇತ್ರಗಳಲ್ಲಿ ಪ್ರಮುಖ ಸುಧಾರಣೆಗಳನ್ನು ಕೈಗೊಳ್ಳಲಾಯಿತು. ಒಂದು ಪ್ರಮುಖ ಸುಧಾರಣೆಯೆಂದರೆ ವಿದೇಶಿ ವಿನಿಮಯ ನಿಯಂತ್ರಣ ಮತ್ತು ಉದಾರೀಕರಣ. ಇದು ಭಾರತೀಯ ಆರ್ಥಿಕತೆಯಲ್ಲಿ ಮಾನದಂಡವನ್ನು ಸಾಬೀತುಪಡಿಸುವ ವಿವಿಧ ರೀತಿಯ ಹೊಸ ಮಾರ್ಗಗಳಿಗೆ ಬಾಗಿಲು ತೆರೆಯಿತು.